ಶ್ರೀ ಎ. ನಾರಾಯಣಸ್ವಾಮಿ : ವಿಶ್ವ ಆರೋಗ್ಯ ಕೇಂದ್ರದವರು ಅದನ್ನು 80 ಲಕ್ಷ ರೂಪಾಯಿಗಳಲ್ಲಿ ತಮ್ಮ ಯೋಜನೆ ಏನಿದೆ ಅದನ್ನು ಪೂರ್ಣಗೊಳಿಸುತ್ತೇವೆ, ಆ ಸಿಬ್ಬಂದಿಗೆ ಸಂಬಳ ಕೊಡುವ ವ್ಯವಸ್ಥೆಯನ್ನು ಪೂರ್ಣವಾಗಿ ನಾವೇ ಮಾಡುತ್ತೇವೆ ಎಂದು ಮುಂದೆ ಬಂದಿದ್ದರು. ತಮಗೆ ಪತ್ರ ಬಂದಿದೆ. ಇದರ ಬಗ್ಗೆ ಏಕೆ ಗಮನ ಹರಿಸಲಿಲ್ಲ? ತಾವು ಅವರಿಗೆ ವಹಿಸಿಕೊಡುವುದಕ್ಕೆ ಏಕೆ ಕಾತರರಾಗಿಲ್ಲ ಎಂದು ದಯವಿಟ್ಟು ಉತ್ತರ ಕೊಡಬೇಕಾಗಿದೆ. ಏಕೆ ನೀವು ನಿರ್ಲಕ್ಷ್ಯ ಮಾಡುತ್ತಿದ್ದೀರಿ? ನೀವು ಅವರ ಸಹಕಾರ ಏಕೆ ಪಡೆಯುತ್ತಿಲ್ಲ? ಇದರ ಬಗ್ಗೆ ಉತ್ತರ ಕೊಡಬೇಕು.

ಡಾ॥ ಎಂ. ಶಂಕರನಾಯಕ್ : ಮಾನ್ಯ ಅಧ್ಯಕ್ಷರೇ, ನಿರ್ಲಕ್ಷ್ಯ ಏನೂ ಇಲ್ಲ. ಏನು ಹೆಲ್ತ್ ಡೆವಲಪ್‌ಮೆಂಟ್ ಸಿಸ್ಟಮ್‌ನಲ್ಲಿ ಎಲ್ಲಾ ತಾಲ್ಲೂಕು ಕೇಂದ್ರಸ್ಥಾನದಲ್ಲಿ ಆಸ್ಪತ್ರೆಗಳನ್ನು 50 ಹಾಸಿಗೆಗಳ ಆಸ್ಪತ್ರೆಗಳಾಗಿ ಡೆವಲಪ್ ಮಾಡಬೇಕು ಎಂದು ಇದೆ; ಅದರ ಪ್ರಕಾರವಾಗಿ ಎಲ್ಲಾ ತಾಲ್ಲೂಕು ಕೇಂದ್ರಸ್ಥಾನದಲ್ಲಿ ಎಲ್ಲೆಲ್ಲಿ ಫಸ್ಟ್ ಫೇಸ್‌ನಲ್ಲಿ ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಂಡಿದೆ. ನಿರ್ಲಕ್ಷ್ಯ ಎಂದು ಅಲ್ಲ. ಅಲ್ಲಿ ಖರ್ಚಾಗತಕ್ಕಂಥ ದುಡ್ಡಿನಲ್ಲಿ ಕಟ್ಟಡ ನಿರ್ಮಾಣ ಮತ್ತು ಸಿಬ್ಬಂದಿವರ್ಗ ಆಗಬೇಕು. ಸಂಬಳ ಎಲ್ಲಾ ಅವರೇ ಕೊಡುತ್ತೇವೆ ಎಂದು ಹೇಳಿದ್ದಾರೆ. ಆ ಆಸ್ಪತ್ರೆಗೆ ಎಷ್ಟು ವೈದ್ಯರು ಬೇಕು ಎಂಬುದು ನಿಗದಿಯಾಗಿದೆ. ಕಟ್ಟಡ ಪೂರ್ಣಗೊಂಡನಂತರ ವೈದ್ಯರುಗಳನ್ನು ಮತ್ತು ಉಪಕರಣಗಳನ್ನು ಸರಬರಾಜು ಮಾಡುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ : ನಿಧಾನ ಏಕೆ ಮಾಡುತ್ತಿದ್ದೀರಿ?

ಅಧ್ಯಕ್ಷರು : ಮಾಡುತ್ತೇನೆ ಎಂದು ಹೇಳಿದ್ದಾರಲ್ಲಾ? ಡಾ॥ ಕರ್ಕಿಯವರು...

ಡಾ॥ ಎಂ.ಪಿ. ಕರ್ಕಿ : ನಮ್ಮ ಪ್ರಶ್ನೆಗಳು ಚುಕ್ಕಿ ಗುರುತಿನ ಪ್ರಶ್ನೆಯಾಗಿ ಬರುವುದಿಲ್ಲ, ಲಿಖಿತ ಮೂಲಕವಾಗಿ ಬರುತ್ತವೆ. ಈಗ ಕೇಳಿರತಕ್ಕಂಥ ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದಾರೆ? ಅವರು ಉತ್ತರ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಮಗೆ ಉತ್ತರ ಏನು ಬಂತು ಎಂಬುದು ಗೊತ್ತಾಗುತ್ತಿಲ್ಲ. ಐದು ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿದೆ.

ಅಧ್ಯಕ್ಷರು : ಅಡಿಷನಲ್ ಆಗಿ ಕೊಟ್ಟಿದ್ದಾರೆ. ಎಲ್ಲರಿಗೂ ಸರ್ಕ್ಯುಲೇಟ್ ಮಾಡಿಲ್ಲವೇನು? ನೋಡಿ ನಮಗೇ ಲೇಟಾಗಿ ಬಂತು. ಈಗ ಮುಂದಿನ ಪ್ರಶ್ನೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಹಳೆಯಳನಡು ಗ್ರಾಮದಲ್ಲಿ ಒಳಚರಂಡಿ ವ್ಯವಸ್ಥೆ.

345- ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲಾ ಹಿರಿಯೂರು ತಾಲ್ಲೂಕು ಹಳೆಯಳನಡು, ಗ್ರಾಮದಲ್ಲಿ, ಕುಡಿಯುವ ನೀರು ಸರಬರಾಜನ್ನು ಓವರ್ ಹೆಡ್ ಟ್ಯಾಂಕ್ ಮೂಲಕ ಒದಗಿಸುತ್ತಿರುವುದು ನಿಜವೆ?

ಅ) *ಈ ಓವರ್ ಹೆಡ್ ಟ್ಯಾಂಕ್‌ನಿಂದ ಹಾಗೂ ಅಲ್ಲಿನ ನಿವಾಸಿಗಳ ಮನೆಗಳಿಂದ ಹೊರಬಂದ ನೀರು ಸೂಕ್ತವಾದ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಟ್ಯಾಂಕ್ ಪಕ್ಕದಲ್ಲಿಯೇ ನೀರು ನಿಂತು ಕೊಳಚೆಯಾಗಿ ಅಲ್ಲಿನ ನಿವಾಸಿಗಳಿಗೆ ಸೊಳ್ಳೆ ಹಾಗೂ ಇತರೆ ಕ್ರಿಮಿ ಕೀಟಗಳಿಂದ ತುಂಬ ತೊಂದರೆ ಪಡುತ್ತಿರುವುದನ್ನು ತಪ್ಪಿಸಲು ಜಿಲ್ಲಾ ಪಂಚಾಯ್ತಿಯವರು ಮಂಜೂರು ಮಾಡಲಾಗಿದ್ದ ಗ್ರಾಂಟನ್ನು ದುರುದ್ದೇಶದಿಂದ ಬೇರೆ ಕಡೆ ವರ್ಗಾಯಿಸಿರುವುದು ಸಂಬಂಧಪಟ್ಟ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆಯೇ, ಹಾಗಿದ್ದರೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿದ್ದಾರೆಯೇ?*

ಆ) *ಹಾಗಿದ್ದಲ್ಲಿ, ಈ ಕೂಡಲೇ ಓವರ್ ಹೆಡ್ ಟ್ಯಾಂಕ್ ಸಮೀಪದಲ್ಲಿರುವ ಕೊಳಚೆಯನ್ನು ತಪ್ಪಿಸಲು ಸೂಕ್ತವಾದ ಒಳಚರಂಡಿ ವ್ಯವಸ್ಥೆಯನ್ನು ಇನ್ನೂ ಎಷ್ಟು ದಿವಸಗಳಲ್ಲಿ ಮಾಡಿ ಮುಗಿಸಲಾಗುವುದು?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು.

ಆ) ಸದರಿ ಓವರ್ ಹೆಡ್‌ನ ಅಕ್ಕಪಕ್ಕದಲ್ಲಿ ಯಾವುದೇ ತರಹದ ದೊಡ್ಡ ಪ್ರಮಾಣದ ತಗ್ಗು ಪ್ರದೇಶವು ಇರುವುದಿಲ್ಲ. ಆದರೆ, ಟ್ಯಾಂಕ್ ಬಳಿ ಇರುವ 3 ಮನೆಗಳಿಂದ ಹೊರ ಬರುವ ಕೊಳಕು ನೀರು ಟ್ಯಾಂಕ್‌ನಿಂದ ಸ್ವಲ್ಪ ದೂರದಲ್ಲಿಯೇ ಹರಿದು ಹೋಗುತ್ತದೆ. ಸದರಿ ಸ್ಥಳವು ಸ್ವಲ್ಪಮಟ್ಟಿಗೆ ಇಳಿಜಾರು ಪ್ರದೇಶವಾಗಿರುವುದರಿಂದ ನೀರು ಸರಾಗವಾಗಿ ಹರಿದು ಗ್ರಾಮದ ಹೊರಪ್ರದೇಶವನ್ನು ಸೇರುತ್ತದೆ. ಆದ್ದರಿಂದ, ಟ್ಯಾಂಕ್ ಪಕ್ಕದಲ್ಲಿ ನೀರು ನಿಂತು ಕೊಳಚೆಯಾಗಿ ಅಲ್ಲಿನ ನಿವಾಸಿಗಳಿಗೆ ಸೊಳ್ಳೆ ಹಾಗೂ ಇತರೆ ಕ್ರಿಮಿಕೀಟಗಳಿಂದ ಗಮನಾರ್ಹವಾದ ತೊಂದರೆಯಾಗಿರುವುದಿಲ್ಲ. ಸದರಿ ಪ್ರದೇಶದಲ್ಲಿ ಚರಂಡಿ ವ್ಯವಸ್ಥೆ ಕಲ್ಪಿಸುವ ಯಾವುದೇ ಕಾಮಗಾರಿಯು ಮಂಜೂರಾಗಿರುವುದಿಲ್ಲ. ಆದ್ದರಿಂದ, ಮಂಜೂರಾಗಿರುವ ಗ್ರಾಂಟನ್ನು ಬೇರೆ ಕಡೆಗೆ ವರ್ಗಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸದರಿ ಪ್ರದೇಶದಲ್ಲಿರುವ ಸಣ್ಣಪುಟ್ಟ ಗುಂಡಿಗಳನ್ನು ಮುಚ್ಚಿ ಕೊಳಚೆ ನೀರು ನಿಲ್ಲದಂತೆ ನೋಡಿಕೊಳ್ಳಲು ಹಾಗೂ ಕೊಳಚೆ ನೀರನ್ನು ದೂರ ಸಾಗಿಸಲು ಸೂಕ್ತ ವ್ಯವಸ್ಥೆ ಮಾಡಲು ಜಿಲ್ಲಾಪಂಚಾಯತ್‌ಗೆ ನಿರ್ದೇಶಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೇ, ನನ್ನ ಎರಡನೇ ಪ್ರಶ್ನೆಗೆ ಸರ್ಕಾರದ ಉತ್ತರ ಏನಿದೆ ಎಂದರೆ 'ಟ್ಯಾಂಕ್ ಪಕ್ಕದಲ್ಲಿ ನೀರು ನಿಂತು ಕೊಳಚೆಯಾಗಿ ಅಲ್ಲಿಯ ನಿವಾಸಿಗಳಿಗೆ ಸೊಳ್ಳೆ ಹಾಗೂ ಇತರ ಕ್ರಿಮಿಕೀಟಗಳಿಂದ ಗಮನಾರ್ಹವಾದ ತೊಂದರೆಯಾಗಿರುವುದಿಲ್ಲ' ಎಂಬ ಮಾತನ್ನು ಹೇಳಿದ್ದೀರಿ. ಅಂದರೆ ನಿಮ್ಮ ಅರ್ಥದಲ್ಲಿ ಗಮನಾರ್ಹವಾದ ತೊಂದರೆಯಾಗಿಲ್ಲವೆಂದರೆ ವಾಸನೆ ಮಾತ್ರ ಬರುತ್ತಿದೆ. ಅಲ್ಲಿಂದ ಸೊಳ್ಳೆಗಳು ಉತ್ಪತ್ತಿಯಾಗಿ, ಯಾರೂ ಸತ್ತಿಲ್ಲ ಎನ್ನತಕ್ಕಂಥ ಅರ್ಥವೇ? ತಾವು ಎರಡು-ಮೂರನೇ ಪ್ರಶ್ನೆಗೆ ಇದನ್ನು ಜಿಲ್ಲಾ ಪಂಚಾಯತ್‌ಗೆ ನಿರ್ದೇಶನ ಮಾಡುತ್ತೇವೆ ಎಂದು ಹೇಳುತ್ತೀರಿ.

ನಾನು ಏಕೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಎಂದರೆ, ಆ ಸ್ಥಳವನ್ನು ನಾನು ಹೋಗಿ ನೋಡಿದ್ದೇನೆ. ಊರಿನಲ್ಲಿ ಸುಮಾರು ಲಕ್ಷಾಂತರ ರೂಪಾಯಿ ಖರ್ಚುಮಾಡಿ ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಮ್‌ನ್ನು ಡೆವಲಪ್ ಮಾಡುವುದಕ್ಕೆ ಖರ್ಚುಮಾಡಿದ್ದಾರೆ. ಆದರೆ ಆ ಭಾಗದ ಸುತ್ತಮುತ್ತಲೂ ಇರತಕ್ಕಂಥವರು ಗುಡಿಸಲುಗಳಲ್ಲಿ ವಾಸಮಾಡತಕ್ಕಂಥವರು. ಅಲ್ಲಿ ಮಾತ್ರ ಕೆಲಸ ಮಾಡುವುದು ಬಿಟ್ಟು ಬೇರೆ ಎಲ್ಲಾ ಕಡೆಯಾಗಿದೆ. ನೀವು ಈಗ ಆದ್ಯತೆ ಮೇರೆಗೆ ಕೆಲಸಗಳನ್ನು ಮಾಡುತ್ತೇವೆ ಎಂದಾಗ ಎಲ್ಲಿ ಮಿನಿವಾಟರ್ ಸಪ್ಲೈ ಇಲ್ಲ, ಓವರ್‌ಹೆಡ್‌ಟ್ಯಾಂಕ್ ಇದೆ, ಬೋರ್‌ವೆಲ್ ಪಾಯಿಂಟ್ಸ್ ಇವೆ, ಅಲ್ಲಿ ನೀರು ನಿಂತು ಕೊಳಚೆಯಾಗುತ್ತಿದೆ, ಇದರಿಂದ ನಾಗರೀಕರ ಜೀವನಕ್ಕೆ ತೊಂದರೆಯಾಗುತ್ತಿದೆ ಎನ್ನತಕ್ಕಂಥಾದ್ದು ಅರ್ಥಮಾಡಿಕೊಂಡು ಅಲ್ಲಿಂದ ಕೆಲಸ ಪ್ರಾರಂಭಮಾಡಬೇಕಾಗುತ್ತದೆ. ಇದು ಕೇವಲ ಒಂದು ಊರಿಗೆ ಸೀಮಿತವಾಗಿರತಕ್ಕಂಥ ಪ್ರಶ್ನೆಯಲ್ಲ. ಇಡೀ ರಾಜ್ಯದಲ್ಲಿರತಕ್ಕಂಥ ಎಲ್ಲಾ ಊರುಗಳ ಬಗ್ಗೆಯೂ ಕೂಡ ನಿರ್ದೇಶನ ಮಾಡಿ ಅಲ್ಲಿ ಕೆಲಸ ಮಾಡಬೇಕು ಎಂದು ಮಾಡಿದ್ದೇವೆ ಎಂಬ ಏನು ಮಾತನ್ನು ಹೇಳಿದ್ದೀರಿ, ತಾವು ಅಧಿಕಾರಿಗಳನ್ನು ಕೇಳಬೇಕಾಗುತ್ತದೆ. ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಅಲ್ಲಿ ಮಾತ್ರ ಏಕೆ ಬಿಟ್ಟಿದ್ದೀರಿ ಎಂದು ಕೇಳಬೇಕಾಗುತ್ತದೆ. ಇದರಲ್ಲಿ ನಿಜವಾಗಿಯೂ ಕೂಡ ತಾರತಮ್ಯ ಆಗಿದೆ ಎಂಬುದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ.

12.10 ಪಿ.ಎಂ

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಆ ಹಳೆಯಳನಡು ಗ್ರಾಮದಲ್ಲಿ, ಓವರ್ ಹೆಡ್ ಟ್ಯಾಂಕ್ ಪಕ್ಕದಲ್ಲಿ, ಮೂರು ಮನೆಗಳಿಂದಲೂ ಕೂಡ ಈ ಕೊಳಚೆ ನೀರು ಬರುತ್ತಾ ಇದೆ. ಅದು ಹರಿದು ಹೋಗುತ್ತಾ ಇದೆ. ಈ ಓವರ್ ಹೆಡ್ ಟ್ಯಾಂಕ್ ಏನೂ ತೀರಾ ತಗ್ಗು ಪ್ರದೇಶದಲ್ಲಿ ಇಲ್ಲ. ಆದರೂ ಕೂಡ ಅಲ್ಲಿ ಕೊಳಚೆಯಾಗಿರತಕ್ಕಂಥಾದ್ದು ಮತ್ತು ಅನೇಕ ಸಂದರ್ಭದಲ್ಲಿ ಬೇರೆಯವರ ಆ ನೈರ್ಮಲ್ಯವಾದಂಥ ಪದ್ಧತಿಗಳ ಪ್ರಕಾರ ಆಗಿದೆ. ತಾವು ಸಲಹೆ ಮಾಡಿದಂತೆ ಅಲ್ಲಿಗೆ ಮಂಜೂರಾಗಿರತಕ್ಕ ಹಣವನ್ನು ನಾವು ಬೇರೆ ಕಡೆಗೆ ವರ್ಗಾವಣೆ ಮಾಡಿಲ್ಲ. ಆದರೂ ಕೂಡ ಆದ್ಯತೆಯ ಮೇಲೆ, ಈ ವರ್ಷದ ಕ್ರಿಯಾ ಯೋಜನೆಯಲ್ಲಿ ಅಲ್ಲಿ ಚರಂಡಿ ವ್ಯವಸ್ಥೆ ಮಾಡಿ, ನೀರು ನಿಲ್ಲದಂತೆ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಬೇಕು ಮತ್ತು ತಗ್ಗುಗಳನ್ನು ಮುಚ್ಚಬೇಕು. ಇದಕ್ಕೆ ನಿರ್ದೇಶನವನ್ನು ಕೊಡುತ್ತೇವೆ. ಆದರೆ, ಅಲ್ಲಿ ಜನ ಸತ್ತಿಲ್ಲವೆಂಬ ಗಮನಾರ್ಹದ ಪ್ರಶ್ನೆಯಲ್ಲ. ಸೊಳ್ಳೆ ಸೃಷ್ಟಿಯಾಗುವಷ್ಟು, ಸೆಸ್‌ಪೂಲ್ಸ್ ಎಂದೇನು ಕರೆಯುತ್ತೇವೆ, ಆ ತರಹದಲ್ಲಿ ನೀರು ನಿಂತು ಕೊಳಚೆಯಾಗಿರುವುದು ಏನೂ ಇಲ್ಲ. ಅದು ತಗ್ಗು ಪ್ರದೇಶವಾಗಿರುವುದರಿಂದ ನೀರು ಹರಿದು ಹೋಗುತ್ತದೆ. ಆದರೆ, ಅದಕ್ಕೆ ಕಾರಣೀಭೂತರಾಗಿರತಕ್ಕಂಥವರು, ನಮ್ಮ ಓವರ್ ಹೆಡ್ ಟ್ಯಾಂಕಿನ ನೀರಿಗಿಂತ ಹೆಚ್ಚಾಗಿ, ಪಕ್ಕದಲ್ಲಿರತಕ್ಕ ಮೂರು ಮನೆಗಳವರ ಬಚ್ಚಲು ಮತ್ತು ಬೇರೆ ನೀರಿನ ಪ್ರಭಾವ ಕೂಡ ಕಾರಣವಾಗಿದೆ. ಆದರೂ ತಮ್ಮ ಸಲಹೆ ಸೂಕ್ತವಾಗಿದೆ. ಅದರಂತೆ ಮಾರ್ಗದರ್ಶನವನ್ನು ಮಾಡುತ್ತೇವೆ.